ಘಟಕಗಳನ್ನು ಕಾವೇರಿ 4ನೇ ಹಂತ, 2ನೇ ಘಟ್ಟದ ಯೋಜನೆಯಲ್ಲಿ ತೆಗೆದು ಕೊಳ್ಳಲಾಗಿದೆ. ಇದರ ಜೊತೆ ಪರಿಸರ ಕ್ರಿಯಾ ಯೋಜನೆ–ಬಿ ಯೋಜನೆ ಅಡಿಯಲ್ಲಿ ನಗರದ ವೃಷಭಾವತಿ ಕಣಿವೆಯ ಹಾಲಿ ಒಳಚರಂಡಿ ವ್ಯವಸ್ಥೆಯ ಪುನರುಜ್ಜೀವನ ಕೆಲಸಗಳನ್ನು ರೂ.50.00 ಕೋಟಿ ಮೊತ್ತದಲ್ಲಿ ಸಹ ತೆಗೆದುಕೊಳ್ಳಲಾಗುತ್ತಿದೆ.

ಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳನ್ನು 3 ವರ್ಷ ಅವಧಿಯಲ್ಲಿ ಅಂದರೆ 2013ರೊಳಗೆ ಅನುಷ್ಠಾನಗೊಳಿಸಲು ಯೋಜಿಸಲಾಗಿದ್ದು, ತದನಂತರ ಭೈರಮಂಗಲ ಕೆರೆಗೆ ತ್ಯಾಜ್ಯ ನೀರನ್ನು ಸೇರುವುದನ್ನು ತಡೆಗಟ್ಟಬಹುದು.

ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹ

583 (1063) ಶ್ರೀ ಬಸವರಾಜ್ ಪಾಟೀಲ ಅಟ್ಟೂರ (ಬಸವ ಕಲ್ಯಾಣ) : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು ಸರ್ಕಾರದ ಮುಂದಿರುವ ಕ್ರಮಗಳೇನು; ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಭಾಗದ ಕ್ರೀಡಾಪಟುಗಳಿಗೆ ಸರ್ಕಾರ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದೆ ಹಾಗೂ ಖರ್ಚು ಮಾಡಿದ ಹಣವೆಷ್ಟು;

ಆ) ಜಿಲ್ಲೆಯಲ್ಲಿ ಈಗ ಇರುವ ಸ್ಟೇಡಿಯಂಗಳ ಸಂಖ್ಯೆ ಎಷ್ಟು? ಜಿಲ್ಲೆಯಲ್ಲಿ ಹೊಸದಾಗಿ ಯಾವ ಸ್ಥಳಗಳಲ್ಲಿ ಸ್ಟೇಡಿಯಂಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ಎಷ್ಟು ಕ್ರೀಡಾ ಪಟುಗಳನ್ನು ಗುರುತಿಸಿ ಅವರುಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ (ಹೆಸರು ವಿವರಗಳನ್ನು ಒದಗಿಸುವುದು)?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು ಸುಸಜ್ಜಿತ ಜಿಲ್ಲಾ ಹೆಸರು ಕ್ರೀಡಾಂಗಣವಿದ್ದು, 12ನೇ ಹಣಕಾಸು ಯೋಜನೆಯಡಿ ರೂ. 188.21 ಲಕ್ಷಗಳ ಅಂದಾಜು ವೆಚ್ಚದಲ್ಲಿ ಈಜುಕೊಳ ಹಾಗೂ ರೂ. 175.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸುವ ಯೋಜನೆ ಹೊಂದಿದೆ. ಜಿಲ್ಲೆಯಲ್ಲಿ ಔರಾದ್ ಮತ್ತು ಹುಮ್ನಾಬಾದ್ ತಾಲ್ಲೂಕು ಕ್ರೀಡಾಂಗಣಗಳು ಪೂರ್ಣಗೊಂಡಿದ್ದು, ಕ್ರೀಡಾಪಟುಗಳ ತರಬೇತಿ ಹಾಗೂ ಕ್ರೀಡಾ ಸ್ಪರ್ಧೆಗಳಿಗೆ ಉಪಯೋಗಿಸಲಾಗುತ್ತಿದೆ. ಹುಮ್ನಾಬಾದ್ ತಾಲ್ಲೂಕಿನ ಮಾಣಿಕ್ ನಗರದಲ್ಲಿ ಈಜುಕೊಳ ನಿರ್ಮಿಸಿದ್ದು, ಇದಕ್ಕಾಗಿ ಕೇಂದ್ರ ಪುರಸ್ಕೃತ ಯೋಜನೆಯಡಿ ರೂ. 25.00 ಲಕ್ಷವನ್ನು ನೀಡಲಾಗಿದ್ದು, ಈ ಈಜುಕೊಳವನ್ನು ಕ್ರೀಡಾಪಟುಗಳು ಉಪಯೋಗಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ 2009–10ನೇ ಸಾಲಿನಲ್ಲಿ ಶೇಕಡ 10 ರಷ್ಟು ಗ್ರಾಮ ಪಂಚಾಯಿತಿಗಳಿಗೆ ಅಂದರೆ 15 ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 1.00 ಲಕ್ಷದಂತೆ ಹಾಗೂ 1 ಬ್ಲಾಕ್ ಪಂಚಾಯಿತಿಗೆ ರೂ. 5.00 ಲಕ್ಷದ ಅನುದಾನದಲ್ಲಿ ಸೇರಿ ಸೇಕಡ 50 ರಷ್ಟು ಅನುದಾನ ಒದಗಿಸಿದ್ದು, ಈ ಯೋಜನೆಯಡಿ ಕ್ರೀಡಾ ಮೂಲಭೂತ ಸೌಲಭ್ಯ ಹಾಗೂ ಆಟದ ಮೈದಾನ ಅಭಿವೃದ್ಧಿ ಪಡಿಸುವ ಯೋಜನೆ ಹೊಂದಲಾಗಿದೆ. 2007ರಲ್ಲಿ ಸ್ಥಾಪಿಸಿರುವ ಜಿಲ್ಲಾ ಕ್ರೀಡಾ ಶಾಲೆಯಲ್ಲಿ 25 ಬಾಲಕ ಹಾಗೂ 25 ಬಾಲಕಿಯರಿಗೆ 5ನೇ ತರಗತಿಯಿಂದ 7ನೇ ತರಗತಿಯವರೆಗೆ ಪ್ರವೇಶ ಕಲ್ಪಿಸಿದ್ದು, ಅಥ್ಲೆಟಿಕ್ಸ್ ಮತ್ತು ವಾಲಿಬಾಲ್ ಕ್ರೀಡೆಗಳಲ್ಲಿ ಪ್ರತಿನಿತ್ಯ ತರಬೇತಿ ನೀಡಲಾಗುತ್ತಿದೆ. ಈ ಕ್ರೀಡಾಪಡುಗಳಿಗೆ ಊಟೋಪಚಾರದ ಹಾಗೂ ವಸತಿ ಸೌಲಭ್ಯವನ್ನು ಉಚಿತವಾಗಿ ಕಲ್ಪಿಸಲಾಗಿದ್ದು ಅಂದಾಜು ರೂ. 130.00 ಲಕ್ಷದ ವೆಚ್ಚದಲ್ಲಿ ಕ್ರೀಡಾ ಶಾಲೆಯ ನೂತನ ಕಟ್ಟಡ ನಿರ್ಮಿಸಲು ಯೋಜಿಸಲಾಗಿದೆ.

ಕಳೆದ 3 ವರ್ಷಗಳ ಅವಧಿಯಲ್ಲಿ ಈ ಭಾಗದ ಕ್ರೀಡಾಪಟುಗಳಿಗೆ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದ್ದು, ಅವುಗಳಿಗೆ ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ:

1. ಜಿಲ್ಲಾ ನೆಹರು ಕ್ರೀಡಾಂಗಣ: ರೂ. 15.10 ಲಕ್ಷ
2. ಔರಾದ್ ತಾಲ್ಲೂಕು ಕ್ರೀಡಾಂಗಣ ರೂ. 33.00 ಲಕ್ಷ
3. ಹುಮ್ನಾಬಾದ್ ತಾಲ್ಲೂಕು ಕ್ರೀಡಾಂಗಣ ರೂ. 35.00 ಲಕ್ಷ
4. ಹುಮ್ನಾಬಾದ್ ತಾ: ಮಾಣಿಕ್ ನಗರದಲ್ಲಿ ಈಜುಕೊಳ: ರೂ. 25.00 ಲಕ್ಷ

ಆ) ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿರುವ ಕ್ರೀಡಾಂಗಣಗಳು:

1) ಜಿಲ್ಲಾ ಒಳಾಂಗಣ ಕ್ರೀಡಾಂಗಣ, ಬೀದರ್
2) ಜಿಲ್ಲಾ ಮಟ್ಟದ ಈಜುಕೊಳ, ಬೀದರ್
3) ತಾಲ್ಲೂಕು ಕ್ರೀಡಾಂಗಣ, ಬಸವಕಲ್ಯಾಣ

ಇ) ಗ್ರಾಮೀಣ ಕ್ರೀಡೆ ಹಾಗೂ ಪಂದ್ಯಗಳಡಿಯಲ್ಲಿ 2006–07ನೇ ಸಾಲಿನಲ್ಲಿ 10 ಕ್ರೀಡಾಪಟುಗಳನ್ನು ಗುರುತಿಸಿ ತಲಾ ರೂ. 5,000 ದಂತೆ ಒಟ್ಟು ರೂ. 50,000ಗಳ ವೆಚ್ಚದಲ್ಲಿ ಜಿಲ್ಲಾ ಕ್ರೀಡಾ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

ಹೆಸರು	ತಾಲ್ಲೂಕು	ಕ್ರೀಡೆ	ಮೊತ್ತ
ಸಂಪತ್ ಕಲ್ಯಾಣ ಶೆಟ್ಟಿ	ಬೀದರ್	ಸೈಕ್ಲಿಂಗ್	5,000
ಕು. ನೀಲಮ್ಮ ಮಲ್ಲಿಗವಾಡ	ಬೀದರ್	ಸೈಕ್ಲಿಂಗ್	5,000
ವಿಶಾಲ ಮಾಳಗಿ	ಬೀದರ್	ಸೈಕ್ಲಿಂಗ್	5,000
ಅಂಬಿಕಾ ರಾಜಕುಮಾರ್	ಬೀದರ್	ಸೈಕ್ಲಿಂಗ್	5,000
ಕು.ರೇಣುಕ ರಾಜಕುಮಾರ್	ಬೀದರ್	ಸೈಕ್ಲಿಂಗ್	5,000
ಸುನಿಲ್ ಸಾಕಳೆ	ಬೀದರ್	ಸೈಕ್ಲಿಂಗ್	5,000
ಸಂದೀಪ ಬೀರಾದರ್	ಬೀದರ್	ಸೈಕ್ಲಿಂಗ್	5,000
ರೇಣುಕ ಮಾದವರಾವ್	ಬೀದರ್	ಅಟೋಟ್	5,000
ವಿಲಾಸ ಅರ್ಜುನ	ಹುಮ್ನಾಬಾದ್	ಅಟೋಟ್	5,000
ಆಕಾಶ್ ರಾಜಪ್ಪ	ಬೀದರ್	ಅಟೋಟ್	5,000

2007–08 ಮತ್ತು 2008–09ನೇ ಸಾಲಿನ ಗ್ರಾಮೀಣ ಕ್ರೀಡೆ ಹಾಗೂ ಪಂದ್ಯಗಳಡಿಯಲ್ಲಿ ಪ್ರತಿ ವರ್ಷಕ್ಕೆ 10 ಕ್ರೀಡಾಪಟುಗಳನ್ನು ಗುರುತಿಸಿ ಕ್ರೀಡಾ ಪ್ರಶಸ್ತಿಗಳನ್ನು ನೀಡಲು ಕ್ರಮವಹಿಸಲಾಗುತ್ತಿದೆ.

ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನು

590 (1050) ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ತಾಲ್ಲೂಕಿನ ಗರಗ, ಮಮ್ಮಿಗಟ್ಟಿ ಹಾಗೂ ಅಕ್ಕ ಪಕ್ಕದ ಗ್ರಾಮದಲ್ಲಿ ಈ ಹಿಂದೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಭೂಸ್ವಾಧೀನಪಡಿಸಿ ಕೊಂಡಿರುವ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಎಷ್ಟು;

ಆ) ಅದರಲ್ಲಿ ಉದ್ದಿಮೆ ಸ್ಥಾಪನೆಗಾಗಿ ಮಂಜೂರು ಮಾಡಿರುವ ಹಾಗೂ ವಸತಿ ಸೌಲಭ್ಯಕ್ಕಾಗಿ ಕಾಯ್ದಿರಿಸಿ ಗ್ರಾಮ, ಸರ್ವೆ ನಂಬರ್ ಮತ್ತು ವಿಸ್ತೀರ್ಣ ಮತ್ತು ವಸತಿ ಉಪಯೋಗಕ್ಕಾಗಿ ಕಾಯ್ದಿರಿಸಿದ ಜಮೀನಿನಲ್ಲಿ ಇಲ್ಲಿಯವರೆಗೆ ಮಂಜೂರಾತಿ ಮಾಡಿರತಕ್ಕಂತಹ (ವೈಯಕ್ತಿಕ ಸಂಘ ಸಂಸ್ಥೆಗಳು) ಹಾಗೂ ಮಂಜೂರಾದ ಜಮೀನಿನ ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣವೆಷ್ಟು;

ಇ) ಉಳಿಕೆಯಾಗಿದ್ದಲ್ಲಿ, ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣ ಎಷ್ಟು, ಮಂಜೂರುದಾರರಿಗೆ ಯಾವ ಮಾನದಂಡ, ಅರ್ಹತೆ ಆಧಾರದಲ್ಲಿ ನೀಡಲಾಗಿದೆ (ವಿವರಗಳನ್ನು ನೀಡುವುದು);

ಈ) ಇನ್ನೂ ಜಮೀನು ಮಂಜೂರಾತಿಗೆ ಲಭ್ಯವಿದೆಯೇ;

ಉ) ಲಭ್ಯವಿದ್ದಲ್ಲಿ ಮಂಜೂರಾತಿಗೆ ಕೋರಿ ಬಂದ ವಿನಾಯಕ್ ಗೃಹ ನಿರ್ಮಾಣ ಸಹಕಾರಿ ಸಂಘ (ನಿಯಮಿತ), ಧಾರವಾಡ ಇವರಿಗೆ ಜಮೀನು ಮಂಜೂರಾತಿ ನೀಡಲು ಅವಕಾಶ ಇದೆಯೇ;

ಊ) ಅವಕಾಶ ಇದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು, ಸದರಿ ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ ಯಾವ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ. ತಿರಸ್ಕರಿಸಿದ ಬಗ್ಗೆ ಹಿಂಬರವನ್ನು ನೀಡಲಾಗಿದೆಯೇ;